ಈ ವರದಿಯ ಮೇರೆಗೆ ದಿನಾಂಕ : 10-11-2008 ರಂದು ಸರ್ವೋಚ್ಚ ನ್ಯಾಯಾಲಯವು ಕಾಮಗಾರಿ ಕೈಗೆತ್ತಿಕೊಳ್ಳಲು ಕೆಲವು ಷರತ್ತುಗಳೊಂದಿಗೆ ಅನುಮತಿ ನೀಡಿರುತ್ತದೆ. ಕರ್ನಾಟಕ ಸರ್ಕಾರ, ಅರಣ್ಯ ಇಲಾಖೆಯ ಅನುಮತಿಯೊಂದಿಗೆ ಈ ಕ್ಷೇತ್ರದಲ್ಲಿ ಕಾಮಗಾರಿ ಪ್ರಾರಂಭಿಸಿ ಡಿಸೆಂಬರ್ - 2009 ರೊಳಗೆ ಪೂರ್ಣಗೊಳಿಸಲಾಗುವುದು.

ಶ್ರೀ ಎಂ. ಸತ್ಯನಾರಾಯಣ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹೇಳಿದ ಹಾಗೆ ಈ ರಸ್ತೆಯ ಕಾಮಗಾರಿ ಆದಷ್ಟು ಬೇಗ ಪೂರ್ಣಗೊಂಡರೆ ಉತ್ತಮ. ಮೈಸೂರಿನಿಂದ ಅಲ್ಲಿಗೆ 40 ಕಿ.ಮೀ.ದೂರವನ್ನು ಒಂದು ಗಂಟೆಯಲ್ಲಿ ಪ್ರಯಾಣ ಮಾಡಬಹುದು. ಆದರೆ, ಅಲ್ಲಿಂದ ಮುಂದಕ್ಕೆ ಇರುವ 31 ಕಿ.ಮೀ. ದೂರದ ಪ್ರಯಾಣಕ್ಕೆ 3 ಗಂಟೆ ಸಮಯ ಬೇಕಾಗುತ್ತದೆ. ಈ ರಸ್ತೆಯಲ್ಲಿ ಸರಕು ಸಾಗಾಣಿಕೆಗೆ ಮತ್ತು ಪ್ರವಾಸೋದ್ಯಮಕ್ಕೆ ಅತೀ ಅವಶ್ಯಕವಾದ ರಸ್ತೆಯಾಗಿರುತ್ತದೆ. ತಾವು ಹೇಳಿದ ಸಮಯದಲ್ಲಿ ದಯವಿಟ್ಟು ಕಾರ್ಯಗತ ಮಾಡಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಈ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ :- 2009ನೇ ಡಿಸೆಂಬರ್‌ರೊಳಗಾಗಿ ಈ ಕಾರ್ಯಕ್ರಮವನ್ನು ಪೂರ್ತಿಗೊಳಿಸುತ್ತೇವೆಂದು ಭರವಸೆ ಕೊಡುತ್ತೇನೆ.

ಉ) ವಿಷಯ:- ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವಾಹನ ದಟ್ಟಣೆ, ಅಪಘಾತಗಳನ್ನು ಕಡಿಮೆ ಮಾಡಲು ಹುಬ್ಬಳ್ಳಿ-ಧಾರವಾಡ ಮಹಾನಗರದ ಮುಖಾಂತರ ಹಾದು ಹೋಗುತ್ತಿರುವ ಹಳೇ ಪೂನಾ-ಬೆಂಗಳೂರು ರಸ್ತೆಯನ್ನು ಷಟ್ಪಥ ರಸ್ತೆಯನ್ನಾಗಿ ಮಾಡುವ ಹಾಗೂ ಸೋಲಾಪುರ ರಸ್ತೆ, ಗೂಟಿ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ ನಂ.4ಗಳನ್ನು ಸಂಪರ್ಕಿಸುವಂತ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಬಗ್ಗೆ.

ಶ್ರೀಮತಿ ಸೀಮಾ ಅಶೋಕ್ ಮಸೂತಿ (ಧಾರವಾಡ) :- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ವಾಹನ ದಟ್ಟಣೆ, ಅಪಘಾತಗಳನ್ನು ಕಡಿಮೆ ಮಾಡಲು ಹುಬ್ಬಳ್ಳಿ-ಧಾರವಾಡ ಮಹಾನಗರದ ಮುಖಾಂತರ ಹಾದು ಹೋಗುತ್ತಿರುವ ಹಳೇ ಪೂನಾ-ಬೆಂಗಳೂರು ರಸ್ತೆಯನ್ನು ಷಟ್ಪಥ ರಸ್ತೆಯನ್ನಾಗಿ ಮಾಡುವ ಹಾಗೂ ಸೋಲಾಪುರ ರಸ್ತೆ, ಗೂಟಿ ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ ನಂ.4ಗಳನ್ನು ಸಂಪರ್ಕಿಸುವಂತೆ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :- ಸನ್ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಕೆಳಕಂಡ ಹೇಳಿಕೆ ನೀಡುತ್ತೇನೆ.

ಹುಬ್ಬಳ್ಳಿ-ಧಾರವಾಡ ಮಹಾನಗರ ವಾಹನ ದಟ್ಟಣೆ ಕಡಿಮೆ ಮಾಡಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಮಧ್ಯದಲ್ಲಿನ ಹಳೆಯ ರಾಷ್ಟ್ರೀಯ ಹೆದ್ದಾರಿ-4 ರ ಹುಬ್ಬಳ್ಳಿ ನಗರದ ಹೊಸುರು ಕ್ರಾಸ್‌ನಿಂದ ಧಾರವಾಡ ನಗರದ ಜುಬಿಲಿ ಸರ್ಕಲ್‌ವರೆಗಿನ 19 ಕಿ.ಮೀ ಉದ್ದದ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸಲು ಯೋಜಿಸಿದ್ದು, ಇದರ ವಿವರವಾದ ಯೋಜನಾ ವರದಿ ತಯಾರಿಸುವ ಕಾರ್ಯವನ್ನು ಶ್ರೀ.ಎಂ.ಎಸ್.ಕಾಡಿಯಾಳಿ ಮತ್ತು ಅಸೋಸಿಯೆಟ್, ನವದೆಹಲಿ ಇವರಿಗೆ ಜುಲೈ 25, 2008 ಕಾರ್ಯಾದೇಶ ನೀಡಲಾಗಿದೆ.

ಸಲಹೆಗಾರರು ಈಗಾಗಲೇ ರಸ್ತೆಯ ಪಂಥಿಕರಣ ಸರ್ವೆ, ವಾಹನ ಸಾಂಧ್ರತೆ ಸರ್ವೆ ಮತ್ತು ಮಣ್ಣಿನ ಪರೀಕ್ಷೆಯನ್ನು ಪೂರ್ತಿಗೊಳಿಸಿ ಕಾರ್ಯಸಾಧ್ಯತೆ ವರದಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮಕ್ಕೆ ಸಲ್ಲಿಸಿದ್ದಾರೆ. ಈ ವರದಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದ ತಾಂತ್ರಿಕ ಸಮಿತಿ ಮತ್ತು ಮಂಡಳಿ ಸಭೆ ಅನುಮೋದನೆ ಪಡೆದು, ನಂತರ ಪರಿಶೀಲಿಸಿ ಅಗತ್ಯ ಅನುದಾನ ಲಭ್ಯತೆ ಆಧರಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

ರಾಷ್ಟ್ರೀಯ ಹೆದ್ದಾರಿ - 4, 63 (ಅಂಕೋಲ-ಗೂಟ ರಸ್ತೆ) ಮತ್ತು 218 (ಬಿಜಾಪುರ-ಹುಬ್ಬಳ್ಳಿ ರಸ್ತೆ)ಗಳನ್ನು ಸಂಪರ್ಕಿಸಲು ಬೈಪಾಸು ರಸ್ತೆಯ ಕಾಮಗಾರಿಯ ಅಲೈನ್‌ಮೆಂಟ್‌ಗೆ ಕೇಂದ್ರ ಸರ್ಕಾರದಿಂದ ಒಪ್ಪಿಗೆ ದೊರೆತಿದೆ. ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ವಿವರವಾದ ಸರ್ವೆ ನಡೆಸಿ ರೂ.10.55 ಕೋಟಿ ಅಂದಾಜು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಅನುಮೋದನೆಗೆ ದಿನಾಂಕ 30-12-2008ರಲ್ಲಿ ಸಲ್ಲಿಸಲಾಗಿದೆ. ಈ ಅಂದಾಜು ಪತ್ರಿಕೆಗೆ ಅನುಮೋದನೆ ನಿರೀಕ್ಷಿಸಲಾಗುತ್ತಿದೆ. ಅನುಮೋದನೆ ಬಂದ ಮೇಲೆ ಮುಂದಿನ ಕಾರ್ಯಕ್ರಮ ಜಾರಿಯಾಗುತ್ತದೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಸೀಮಾ ಅಶೋಕ ಮಸೂತಿ :- ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ-ಧಾರವಾಡದ ಮಧ್ಯೆ ಷಟ್ಪಥ ಅಂದರೆ 6 ಲೈನ್‌ಗಳ ರಸ್ತೆಯಾಗಬೇಕೆಂದು ನಾನು ಪ್ರಶ್ನೆಯನ್ನು ಕೇಳಿದ್ದೇನೆ.

ಅಧ್ಯಕ್ಷರು:- ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರು ಸ್ಪಷ್ಟೀಕರಣ ಕೇಳುವುದಾದರೆ ಕೇಳಿ.

ಶ್ರೀ ಸಿ.ಎಂ. ಉದಾಸಿ :- 6 ಪಥದ ರಸ್ತೆಯಾಗಬೇಕೆಂದು ಬೇಡಿಕೆ ಇಟ್ಟಿದ್ದಾರೆ. ಆದರೆ, ನಾಲ್ಕು ಪಥದ ರಸ್ತೆಯಾನ್ನಾಗಿ ಮಾಡುತ್ತಿರುವುದರಿಂದ ಅವರಿಗೆ ಅನುಮಾನ ಬಂದಿರಬೇಕು. ಈಗ ನಾಲ್ಕು ಪಥದ ರಸ್ತೆಯನ್ನು ಸದ್ಯಕ್ಕೆ ಮಾಡಲಾಗಿದೆ. ಇದರಲ್ಲಿ ತಮ್ಮ ಸಲಹೆ ಕೂಡ ಇತ್ತೆಂದು ನಾನು ಗಮನಿಸಿದ್ದೇನೆ.

ಅಧ್ಯಕ್ಷರು :- ಮಾನ್ಯ ಉದಾಸಿಯವರೆ, ಬಹುಶ: ಎಲ್ಲ ಮಂತ್ರಿಗಳು ಮತ್ತು ಎಲ್ಲ ಶಾಸಕರು ಅದೇ ರಸ್ತೆಯಲ್ಲಿ ಹೋಗಿಬರುವಂಥದ್ದನ್ನು ತಾವು ನೋಡುತ್ತಿದ್ದೀರಿ. ಆದ್ದರಿಂದ, ಆ ರಸ್ತೆಯನ್ನು ಎಷ್ಟು ಬೇಗ ಮಾಡುವುದಕ್ಕೆ ಸಾಧ್ಯವಿದೆಯೋ ಅಷ್ಟು ಬೇಗ ಮಾಡಬೇಕಾಗುತ್ತದೆ.

ಶ್ರೀಮತಿ ಸೀಮಾ ಅತೋಕ ಮಸೂತಿ :- ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಸದರಿ ಕಾಮಗಾರಿಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ಮತ್ತು ಈ ಕೆಲಸಕ್ಕೆ ಏನಾದರು ಕಾಲಮಿತಿ ಇಟ್ಟುಕೊಳ್ಳಲಾಗಿದೆಯೇ?

ಶ್ರೀ ಸಿ.ಎಂ. ಉದಾಸಿ :- ಇದನ್ನು ಸುಲಭವಾಗಿ ಹೇಳುವುದಕ್ಕೆ ಆಗುವುದಿಲ್ಲ. ಅತೀ ಶೀಘ್ರದಲ್ಲಿ ಮಾಡಲಾಗುತ್ತದೆ. ನಾನೂ ಕೂಡ ಹಳೆಯ ಧಾರವಾಡದ ಮನುಷ್ಯನಾಗಿದ್ದೇನೆ.

ಅಧ್ಯಕ್ಷರು:- ನೀವು ಯಾವಾಗಲೂ ಅದೇ ರಸ್ತೆಯ ಮೂಲಕ ಹೋಗಿ ಬರುತ್ತೀರಿ.

ಶ್ರೀ ಸಿ.ಎಂ. ಉದಾಸಿ:- ಅತೀ ಶೀಘ್ರದಲ್ಲಿ ರಸ್ತೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಊ) ವಿಷಯ :- ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಠೇವಣಿ ಹಣ ಮತ್ತು ಸ್ಥಳವನ್ನು ನೀಡಿಲ್ಲ ಎಂಬ ಕಾರಣಕ್ಕಾಗಿ ಸ್ಥಳಾಂತರಿಸುತ್ತಿರುವ ಬಗ್ಗೆ.

ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ) :- ಮಾನ್ಯ ಅಧ್ಯಕ್ಷರೆ, ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಮಂಜೂರಾದ ಆರೋಗ್ಯ ಕೇಂದ್ರಗಳನ್ನು ಠೇವಣಿ